# ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.

**ಸಿಸಿ .478/2024**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ಸುನೀಲ್ | **ಚಾ.ಸಾ.-4** |
| **ತಂದೆ/ಗಂಡನ ಹೆಸರು** | - | ಸಿದ್ಧಯ್ಯ | **ಫ್ರಾ.ಸಾ.-7** |
| **ವಯಸ್ಸು** | - | 31 ವರ್ಷ | |
| **ಉದ್ಯೋಗ** | - | ವ್ಯಾಪಾರ | |
| **ವಾಸಸ್ಥಳ** | - | ಅರುವನಹಳ್ಳಿ ಗ್ರಾಮ | |

ದಿನಾಂಕಃ 10-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಚಾ.ಸಾ. 1 ಮತ್ತು 2 ರವರ ಪರಿಚಯವಿರುತ್ತದೆ. ನಮ್ಮ ಗ್ರಾಮಸ್ಥರು. ಆರೋಪಿತರು ನಮ್ಮ ಗ್ರಾಮಸ್ಥರು. ದಿಃ20-01-2024 ರಂದು ಮಧ್ಯಾಹ್ನ 12-30 ರಿಂದ 01-00 ಗಂಟೆ ಸಮಯದಲ್ಲಿ ನಾನು ನಮ್ಮ ಗ್ರಾಮದ ಕಡೆಯಿಂದ ನಮ್ಮ ಗ್ರಾಮದ ಬಳಿಯಿರುವ ಶನೇಶ್ವರ ದೇವಸ್ಥಾನದ ಕಡೆಗೆ ಹೋಗುತ್ತಿದ್ದಾಗ ಚಾಸಾ-2 ರವರ ಹೊಲದ ಬಳಿ ಆರೋಪಿತರು ಚಾಸಾ-2 ರವರ ಜೊತೆ ಜಗಳ ಮಾಡುತ್ತಿದ್ದರು. ಆರೋಪಿತರು ಚಾಸಾ-2 ರವರ ಮೇಲೆ ಹಲ್ಲೆ ಮಾಡಿದ್ದು ಅವರು ಆ ಸಮಯದಲ್ಲಿ ಕೆಳಗೆ ಬಿದ್ದು ಹೋಗಿರುತ್ತಾರೆ. ಆಗ ನಾನು ಚಾಸಾ-2 ರವರನ್ನು ಉಪಚರಿಸಿ ವಿಚಾರ ಮಾಡಿದಾಗ, ಈ ದಿನ ಜಮೀನನ್ನು ಸರ್ವೆ ಮಾಡಲು ಸರ್ವೆಯರ್ ಬಂದಿದ್ದು ನನಗೆ ನೋಟಿಸ್ ನೀಡಿರುವುದಿಲ್ಲ ಅದನ್ನು ಕೇಳಿದಾಗ ಗಲಾಟೆ ಮಾಡಿ ಹಲ್ಲೆ ಮಾಡಿರುತ್ತಾರೆಂದು ನನಗೆ ತಿಳಿಸಿರುತ್ತಾರೆ. ನಂತರ ನಾನು ಚಾಸಾ-1 ರವರಿಗೆ ವಿಚಾರವನ್ನು ತಿಳಿಸಿರುತ್ತೇನೆ. ನಂತರ ನಾನು ಗಾಯಾಳುವನ್ನು ಕೆ ಹೊನ್ನಲಗೆರೆಯಲ್ಲಿರುವ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನು

ಕೊಡಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿತರು ನ್ಯಾಯಾಲಯಕ್ಕೆ ಗೈರುಹಾಜರಾಗಿದ್ದು ಆರೋಪಿ ಪರ ವಕೀಲರು ಆರೋಪಿಗಳನ್ನು ಗುರುತಿಸುವ ಬಗೆಗೆ ತಮ್ಮ ತಕರಾರು ಇರುವುದಿಲ್ಲವೆಂದು ತಿಳಿಸಿರುತ್ತಾರೆ. ನಾನು 24-01-2024 ರಂದು ಹೇಳಿಕೆಯನ್ನು ನೀಡಿರುತ್ತೇನೆ.

**<u>ಪಾಟೀಸವಾಲು ಆರೋಪಿ ಪರ ಶ್ರೀ ಎಂ ಎಂ ಎಂ ವಕೀಲರಿಂದ</u>**

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ದಿನ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿ ವಿಚಾರಣೆಗೆ ಹಾಜರಾಗಬೇಕೆಂದು ನನಗೆ ಸಮನ್ಸ್ ಬಂದಿರುತ್ತದೆ. ಸಮನ್ಸ್ ಬಂದ ಮೇರೆಗೆ ನಾನೇ ನ್ಯಾಯಾಲಯಕ್ಕೆ ಬಂದಿರುತ್ತೇನೆ. ಚಾಸಾ-1 ರವರು ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆಂದರೆ ಸರಿಯಲ್ಲ. ಈ ಹಂತದಲ್ಲಿ ಆರೋಪಿ ಪರ ವಕೀಲರು ಚಾಸಾ-1 ರವರು ನ್ಯಾಯಾಲಯದಲ್ಲಿ ಹಾಜರಿರುವ ಬಗ್ಗೆ ನ್ಯಾಯಾಲಯದ ಗಮನಕ್ಕೆ ತಂದಿರುತ್ತಾರೆ. ಆರೋಪಿತರ ಮತ್ತು ನನ್ನ ನಡುವೆ ಹಳೇ ವೈಷಮ್ಯವಿತ್ತು ಎಂದರೆ ಸರಿಯಲ್ಲ. ಗಲಾಟೆ ಸಮಯದಲ್ಲಿ ಚಾಸಾ-2 ಮತ್ತು ಆರೋಪಿತರು ಮಾತ್ರ ಸ್ಥಳದಲ್ಲಿದ್ದರು. ನಾನು ಗಲಾಟೆ ನಡೆಯುವ ಸಮಯದಲ್ಲಿ ಸ್ಥಳಕ್ಕೆ ಹೋಗಿರುತ್ತೇನೆ. ಆರೋಪಿ-1 ರವರು ಚಾಸಾ-2 ರವರ ತಲೆಯ ಮೇಲೆ ಹೊಡೆದಿರುತ್ತಾರೆ. 2 ಮತ್ತು 3 ನೇ ಆರೋಪಿತರು ಚಾಸಾ-2 ರವರಿಗೆ ಕಾಲಿನಿಂದ ಒದ್ದಿರುತ್ತಾರೆ. ಆ ಸಮಯದಲ್ಲಿ ನಾನು ಒಬ್ಬನೇ ಹೋಗಿ ಗಲಾಟೆಯನ್ನು ಬಿಡಿಸಿರುತ್ತೇನೆ. ಗಲಾಟೆಯಾಗುತ್ತಿದ್ದ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಪಕ್ಕದಲ್ಲಿದ್ದ ಆರೋಪಿತರ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಹಿಂದಿನಿಂದಲೂ ಸಹ ಆರೋಪಿತರಿಗೂ ಚಾಸಾ-1 ಮತ್ತು 2 ರವರ ನಡುವೆ ಜಮೀನಿನ ಅಳತೆ ವಿಚಾರವಾಗಿ ವೈಮನಸ್ಸು ಇತ್ತು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಜಮೀನನ್ನು ಅಳತೆ ಮಾಡುವ ಸಲುವಾಗಿ 2-3 ಭಾರಿ ಅರ್ಜಿಯನ್ನು ಸಲ್ಲಿಸಿದ ವಿಚಾರ ನನಗೆ ಗೊತ್ತಿಲ್ಲ. ನಾನು ಚಾಸಾ-2 ರವರನ್ನು ಸುಮಾರು ಮಧ್ಯಾಹ್ನ 01-30 ಗಂಟೆ ಸಮಯದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆರೋಪಿತರು, ಚಾಸಾ- 2 ರವರ ನಡುವೆ ಯಾವುದೇ ಗಲಾಟೆಯಾಗದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪೊಲೀಸರು ಸ್ಥಳ

ಮಹಜರ್ ಗೆ ಬಂದಂತಹ ಸಮಯದಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ. ನಾನು ನೀಡಿದ ಹೇಳಿಕೆಯನ್ನು ಪೊಲೀಸರು ಕೈ ಬರಹದಲ್ಲಿ ಬರವಣಿಗೆ ಮಾಡಿಕೊಂಡಿರುತ್ತಾರೆ. ನಾನು ಕೈ ಬರಹದ ಹೇಳಿಕೆಗೆ ಸಹಿಯನ್ನು ಮಾಡಿರುತ್ತೇನೆ. ಆರೋಪಿತರು ಮತ್ತು ನನ್ನ ನಡುವೆ ವೈಮನಸ್ಸಿನಿಂದ ನಾನು ಚಾಸಾ-1 ಮತ್ತು 2 ರವರೊಂದಿಗೆ ಶರೀಕಾಗಿ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡದೇ ಹೋದರೂ ಸಹ ಹೇಳಿಕೆ ನೀಡಿರುವುದಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಯಾವುದೇ ಗಲಾಟೆಯನ್ನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.